ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ಗಮನಕ್ಕೆ ತಂದು ಉತ್ತರ ಒದಗಿಸುತ್ತೇನೆ.

3) ಕಡೂರು ತಾಲ್ಲೂಕಿನಲ್ಲಿ ಮಳೆ ಬರದೇಇರುವುದರಿಂದ ಈ ತಾಲ್ಲೂಕನ್ನು ಬರಗಾಲವೆಂದು ಘೋಷಿಸುವುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) :

1. ಕಡೂರು ತಾಲ್ಲೂಕಿನಲ್ಲಿ ಈಗಾಗಲೇ ಮಳೆ ಬರದೇ ಇರುವುದರಿಂದ ಕಡೂರು ತಾಲ್ಲೂಕಿನ ಜನರಿಗೆ ಮುಂಗಾರು ಮಳೆ ವಿಫಲವಾಗಿರುವುದಲ್ಲದೆ ಮತ್ತು ಹಿಂಗಾರು ಮಳೆ ಅಲ್ಪಸ್ವಲ್ಪ ಬಂದಿದ್ದರಿಂದ ಶೇಕಡ 50-60 ಭಾಗ ಆಗಿದ್ದರೂ ಮಫ್ ಮತ್ತು ಉತ್ತರೆ ದೊಡ್ಡಮಳೆಗಳು ಬಾರದೇ ಇರುವುದರಿಂದ ಹಿಂಗಾರು ಬೆಳೆ ರಾಗಿ ಬೆಳೆಯೂ ಸಹ ಪೂರ್ಣವಾಗಿ ಒಣಗಿಹೋಗಿರುತ್ತದೆ. ಆದ್ದರಿಂದ ಕಡೂರು ತಾಲ್ಲೂಕನ್ನು ಬರಗಾಲವೆಂದು ಘೋಷಿಸಬೇಕೆಂದು ಸರ್ಕಾರದ ಗಮನಕ್ಕೆ ತರುತ್ತೇನೆ.
2. ಕಡೂರು ತಾಲ್ಲೂಕಿನ ಎಲ್ಲಾ ಕೆರೆಕಟ್ಟೆಗಳು ಒಣಗಿಹೋಗಿದ್ದು ಅಂತರ ಜಲದ ಮಟ್ಟ ಕಡಿಮೆಯಾಗಿದ್ದು ಕುಡಿಯುವ ನೀರಿನ ತೊಂದರೆಯಾಗಿರುವುದರಿಂದ ಸರ್ಕಾರ ಆದಷ್ಟು ತೀವ್ರವಾಗಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.
3. ಜಿಲ್ಲೆಯ ಜಾನುವಾರುಗಳ ಸಂಖ್ಯೆಯಲ್ಲಿ ಕಡೂರು ತಾಲ್ಲೂಕಿನ ಜಾನುವಾರುಗಳ ಸಂಖ್ಯೆ ಶೇಕಡ 60 ಭಾಗವಿರುತ್ತದೆ. ಅವುಗಳಿಗೆ ಜಾನುವಾರುಗಳ ಮೇವಿಗೆ (ಹುಲ್ಲು) ತೊಂದರೆಯಾಗಿರುವುದರಿಂದ ತೀವ್ರವಾದ ಕ್ರಮ ತೆಗೆದುಕೊಂಡು ಸಮಸ್ಯೆಯನ್ನು ಬಗೆಹರಿಸಬೇಕೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.
4. ಕಡೂರು ತಾಲ್ಲೂಕಿನಲ್ಲಿ 1000-00 ಎಕರೆ ಅಮೃತಮಹಲ್ ಕಾವಲಿದ್ದು 1986-97ರ ಸಾಲಿನಲ್ಲಿ ಬರಗಾಲ ಬಂದ ಸಂದರ್ಭದಲ್ಲಿ ಪ್ರತಿ ದಿನ 25 ಟನ್ ಹಸಿರು ಮೇವನ್ನು ಬೆಳೆಯುತ್ತಿದ್ದು ಈಗಲೂ ಏಕೆ ಬೆಳೆಸಬಾರದೆಂದು ಸರ್ಕಾರದ ಗಮನಕ್ಕೆ ತರಬಯ ಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಕಂದಾಯ ಮಂತ್ರಿಗಳ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ದಿನಾಂಕ 16.9.1995ರವರೆಗಿನ ಮಳೆ ಮತ್ತು ಬೆಳೆ ಪರಿಸ್ಥಿತಿ ವರದಿಯ ಪ್ರಕಾರ ರಾಜ್ಯದ 175 ತಾಲ್ಲೂಕುಗಳ ಪೈಕಿ 136 ತಾಲ್ಲೂಕುಗಳಲ್ಲಿ ಅಧಿಕ ಮತ್ತು ಮಾಮೂಲು ಮಳೆಯಾಗಿದ್ದು, ಕೇವಲ 39 ತಾಲ್ಲೂಕುಗಳಿಲ್ಲ ಮಾತ್ರ ಮಳೆಯ ಕೊರತೆಯುಂಟಾಗಿರುತ್ತದೆ. ಆದಾಗ್ಯೂ ತೀವ್ರ ಕೊರತೆ ಇರುವ ತಾಲ್ಲೂಕುಗಳು ಯಾವುವೂ ಇರುವುದಿಲ್ಲ. ಹಿಂದಿನ ವರ್ಷ ಇದೇ ಅವಧಿಯಲ್ಲಿ ರಾಜ್ಯದ 85 ತಾಲ್ಲೂಕುಗಳಲ್ಲಿ ಮಳೆ ಕೊರತೆಯುಂಟಾಗಿತ್ತು.

ಜಿಲ್ಲೆಯ ಎಲ್ಲೆಡೆ ಸಾಧಾರಣವಾಗಿ ಉತ್ತಮ ಮಳೆಯಾಗಿದ್ದು, ಕಡೂರು ತಾಲ್ಲೂಕಿನಲ್ಲಿ ಆಗಸ್ಟ ಅಂತ್ಯದವರೆಗೆ 104.7 ಮಿ.ಮಿ. ಮಳೆಯುಂಟಾಗಿದೆ.

ಚಿಕ್ಕಮಗಳೂರು ಜಿಲ್ಲೆಯಯ ಕಸಬಾ ಹೋಬಳಿಯ ಕೆಲವು ಗ್ರಾಮಗಳು, ಲಕ್ಯಾ, ಆಂಬಳಿ ಹೋಬಳಿಗಳು ಮತ್ತು ಕಡೂರು ಮತ್ತು ತರೀಕೆರೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಸ್ವಲ್ಪಮಟ್ಟಿಗಿದ್ದು, ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಸಂತ್ರಸ್ಥ ಗ್ರಾಮಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ 471 ಕೊಳವೆ ಬಾವಿಗಳನ್ನು ಕೊರೆಯಲು ಕ್ರಮಕೈಗೊಂಡಿದ್ದು, ಈ ಪೈಕಿ 315 ಕೊಳವೆ ಭಾವಿಗಳನ್ನು ಕೊರೆದು ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಈಗಾಗಲೇ ಅವಶ್ಯ ಕ್ರಮಕೈಗೊಳ್ಳಲಾಗಿದೆ. ಕುಡಿಯುವ ನೀರಿನ ಪೂರೈಕೆಗಾಗಿ ಜಿಲ್ಲೆಗೆ ಈಗಾಗಲೇ 332.04 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ಕಡೂರು ಗ್ರಾಮಾಂತರ ಪ್ರದೇಶದಲ್ಲಿ 43 ಕೊಳವೆ ಬಾವಿಗಳು, 5 ಕಿರು ನೀರು ಸರಬರಾಜು ಯೋಜನೆಗಳನ್ನು ಒದಗಿಸಿದ್ದು, ಕಡೂರು ನಗರ ಪ್ರದೇಶದಲ್ಲಿ 2 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇಷ್ಟಲ್ಲದೆ, ಹಳೆ ಕೊಳವೆ ಭಾವಿಗಳನ್ನು ಪುನರುಜ್ಜೀವನಗೊಳಿಸಲೂ ಕ್ರಮ ಕೈಗೊಳ್ಳಲಾಗಿದೆ.

ಜಿಲ್ಲೆಯಾದ್ಯಂತ ವಾಡಿಕೆ ವಿಸ್ತೀರ್ಣವಾದ 1,84, 800 ಹೆಕ್ಟೇರ್ ಪ್ರದೇಶದ ಪೈಕಿ 1,5,141 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು ಬೆಳೆ ಪರಿಸ್ಥಿತಿ ಉತ್ತಮವಾಗಿದೆ. ಈ ಪೈಕಿ ಕಡೂರು ತಾಲ್ಲೂಕಿನ 79,845 ಹೆಕ್ಟೇರ್ ಪೈಕಿ 71,961 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕಾರ್ಯ ಕೈಗೊಳ್ಳಲಾಗಿದೆ.

ಜಾನುವಾರುಗಳಿಗೆ ಮೇವು ಪೂರೈಸುವ ಸಲುವಾಗಿ ಜಿಲ್ಲೆಗೆ 5.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ 1.30 ಲಕ್ಷ ರೂ.ಗಳನ್ನು ಈಗಾಗಲೇ ವೆಚ್ಚ ಮಾಡಲಾಗಿದೆ. ಚಿಕ್ಕಮಗಳೂರು, ಕಡೂರು ಮತ್ತು ತರೀಕೆರೆ ತಾಲ್ಲೂಕುಗಳಲ್ಲಿನ ಒಟ್ಟು 41 ಗ್ರಾಮಗಳಲ್ಲಿ 54 ಲಾರಿ ಲೋಡುಗಳಷ್ಟು ಮೇವನ್ನು ಪೂರೈಕೆ ಮಾಡಲಾಗಿದೆ. ಇದರಿಂದ 42, 622 ಜಾನುವಾರುಗಳಿಗೆ ಅನುಕೂಲವಾಗಿರುತ್ತದೆ, ಅಲ್ಲದೆ 30 ಕ್ವಿಂಟಾಲ್ ಹುಲ್ಲಿನ ಬೀಜವನ್ನೂ ಒದಗಿಸಲಾಗಿದೆ. ಹೀಗಾಗಿ ಜಾನುವಾರುಗಳ ಮೇವಿಗೆ ಏನೂ ತೊಂದರೆಯಿರುವುದಿಲ್ಲ. ಇಷ್ಟಲ್ಲದೆ, ಆಜ್ಜಂಪುರ ಫಾರಂನಲ್ಲಿ ಹುಲ್ಲು ಬೆಳಸಲು ಕ್ರಮ ಕೈಗೊಂಡಿದ್ದು, ಇದೇ ರೀತಿ ಕಡೂರೂ ತಾಲ್ಲೂಕಿನಲ್ಲಿನ ಅಮೃತ್ ಮಹಲ್ ಕಾವಲನಲ್ಲಿಯೂ ಸಹ ಮಾನ್ಯ ಸದಸ್ಯರು ತಿಳಿಸಿರುವಂತೆ ಹುಲ್ಲು ಬೆಳೆಸುವ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗುವುದು. ಕಡೂರು ತಾಲ್ಲೂಕಿನ 16 ಗ್ರಾಮಗಳಿಗೆ ಸೇರಿದ 3,201 ಜನರಿಗೆ ರಿಯಾಯತಿ ದರದಲ್ಲಿ ಮೇವು ಹಂಚಲಾಗಿದೆ.

ಕಡೂರು ತಾಲ್ಲೂಕಿನಲ್ಲಿ 158 ಕಾಡುಗದರಿಗಳನ್ನು 160. 98 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಅವಶ್ಯವಿರುವ ಕೃಷಿ ಕಾರ್ಮಿಕರಿಗೆ ಉದ್ಯೋಗವನ್ನು ಒದಗಿಸಲು ಕ್ರಮ ಕೈಗೊಂಡಿದ್ದು, ಪರಿಹಾರ ಕಾರ್ಯಗಳ ಉಸ್ತುವಾರಿಗಾಗಿ ತಾಲ್ಲೂಕು ಮಟ್ಟದಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ಪರಿಹಾರ ಕಾರ್ಯಗಳ ಪರಿವೀಕ್ಷಣೆಯನ್ನು ಜಿಲ್ಲಾಧಿಕಾರಿಯವರು ನಿಯಮಿತವಾಗಿ ನಡೆಸುತ್ತಿದ್ದಾರೆ.

ಜಿಲ್ಲಾಧಿಕಾರಿಯವರಿಗೆ ಸಾಕಷ್ಟು ಅನುದಾನವನ್ನು ಬಿಡುಗಡೆ ಮಾಡಿದ್ದು, ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಯಾವುದೇ ತೊಂದರೆ ಇರುವುದಿಲ್ಲ.

11.40 ಪಿ.ಎಂ

4) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ : 17ರಲ್ಲಿ ಬೈಂದೂರಿನಿಂದ ಮಂಗಳೂರಿಗೆ ಹೋಗಿಬರುವ ಬಸ್‌ಗಳಿಗೆ ಬೇಕಾಬಿಟ್ಟಿ ಪರವಾನಿಗೆ ನೀಡಿರುವ ಬಗ್ಗೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿ ನಂಬರ್ 17ರಲ್ಲಿ ಬೈಂದೂರಿನಿಂದ ಮಂಗಳೂರುವರೆಗೆ, ಮಂಗಳೂರಿನಿಂದ ಬೈಂದೂರುವರೆಗೆ ಎಕ್ಸಪ್ರೆಸ್ ಬಸಗಳಿಗೆ ಬೇಕಾಬಿಟ್ಟಿಯಾಗಿ ಪರವಾನಿಗೆ ನೀಡಿ ಕೆಲವೊಂದು ಸಮಯದಲ್ಲಿ ನಿಮಿಷಕ್ಕೆ ನಾಲ್ಕೈದು ಬಸಗಳು ಏಕಕಾಲಕ್ಕೆ ಹೊರಡುವ ಪರಿಸ್ಥಿತಿಯಿಂದ ಡ್ರಾರಿಯುದ್ದಕ್ಕೂ ವಾಹನ ಅಪಘಾತಗಳು ನಡೆದು ನೂರಾರು ಜನರು ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಷ್ಟು ಬಸಗಳಿಗೆ ಈ ಪರವಾನಿಗೆ ನೀಡಲ್ಪಟ್ಟಿದೆ? ಇನ್ನೂ ಮುಂದಕ್ಕೂ ನೀವು ಸರಕಾರ ಪರವಾನಿಗೆ ನೀಡುತ್ತೀರಾ, ಎಂಬುದರ ಬಗ್ಗೆ ಸನ್ಮಾನ್ಯ ಸಾರಿಗೆ ಸಚಿವರ ಗಮನಸೆಳೆಯಬಸುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ (ಸಾರಿಗೆ ಸಚಿವರ ಪರವಾಗಿ) : ಬೈಂದೂರಿನಿಂದ ಮಂಗಳೂರು ವರೆಗೆ ರಾಷ್ಟ್ರೀಯ ಹೆದ್ದಾರಿ -17 ರ ಮಾರ್ಗದಲ್ಲಿ ಈವರೆಗೆ 20 ಮಜಲು ವಾಹನ ಪರವಾನಗಿಗಳನ್ನು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರು ನೀಡಿರುತ್ತಾರೆ. ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರವು ಬೈಂದೂರು ಮಾರ್ಗದಲ್ಲಿ ಸಂಚರಿಸಲು 14 ಇತರ ಮಾರ್ಗಗಳಿಗೆ ಪರವಾನಗಿಗಳನ್ನು ನೀಡಿರುತ್ತಾರೆ. ಈ ಮಾರ್ಗದಲ್ಲಿ ಬೇರೆ ಬೇರೆ ಮಾರ್ಗಗಳಿಗೆ ಸಂಚರಿಸುವ 104 ಮಜಲು ವಾಹನಗಳಿಗೆ ರಹದಾರಿಯನ್ನು ನೀಡಿಲ್ಲ. 1991ರ ನಂತರ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚಾಗುತ್ತಿರುವ ಅಪಘಾತಗಳನ್ನು ನಿಯಂತ್ರಿಸುವ ಸಲುವಾಗಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು ಇವರು ರಹದಾರಿಯನ್ನು ನೀಡುತ್ತಿಲ್ಲ. ಆದರೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಆದೇಶದ ಮೇಲೆ ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ನ್ಯಾಯಾಧಿಕರಣ, ಬೆಂಗಳೂರು ಇವರಲ್ಲಿ ಅಪೀಲುಗಳನ್ನು ಸಲ್ಲಿಸಿ ಆದೇಶವನ್ನು ಪಡೆದು ರಹದಾರಿಯನ್ನು ಪಡೆಯುತ್ತಿದ್ದಾರೆ. 1988ರ ಮೋಟಾರು ವಾಹನ ಕಾಯ್ದೆ ಪ್ರಕರಣ ಯಾವುದೇ ನಿಬಂಧನೆ ಇರುವುದಿಲ್ಲ, ಮತ್ತು ಅರ್ಜಿಗಳನ್ನು ವಿನಾಕಾರಣವಾಗಿ ತಿರಸ್ಕರಿಸಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕಾಗಲಿ, ಅಥವಾ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರಕ್ಕಾಗಲೀ, ಅಧಿಕಾರವಿರುವುದಿಲ್ಲ. ವಾಹನ ಅಪಘಾತಗಳು ನಡೆದು ಸಾವು-ನೋವುಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಂತಹ ಪ್ರಕರಣಗಳಲ್ಲಿ ಮಂಗಳೂರು - ಬೈಂದೂರು ಮಾರ್ಗಗಳಲ್ಲಿ ರಹದಾರಿಯನ್ನು ನೀಡಲಾಗುವುದಿಲ್ಲ.

ಅಧ್ಯಕ್ಷರು : ಸದನ ಕಲಾಪ ಸಮಿತಿಯ ತೀರ್ಮಾನದನ್ವಯ ಇವತ್ತು ಮಂಡಿಸಿರತಕ್ಕಂತ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮ ಏನೂ ಇರಲಿಲ್ಲ. ಚರ್ಚೆಗೆ ನಾವು